


ಎಡದಿಂದ ಬಲಕ್ಕೆ:

1. ಹಸುವಿನಂಥ ವದನ–ಒಳ್ಳೇ ನಗುಮೊಗ (4)
3. ದೇವಾಲಯದ ಒಳ ಹೊರಗೆಲ್ಲ ಶುದ್ಧ ಬಿಳುಪಿನ ಬಣ್ಣ (3)
4. ಮದುವೆ ಛತ್ರದ ಸುತ್ತ ಚಿತ್ರ ಸದೃಶ ಅಲಂಕಾರ (3)
6. ಶತ್ರು ಪಾಳಯವನ್ನ ಕಂಡೊಡನೆ ಓಡಿಹೋಗುವುದೇ? (4)
8. ಸಾಹಸದಿಂದ ಹೊಂದಿಸಿದ ಈ ಕ್ರಮ 'ನೂತನ ಮಾರ್ಗ' (4)
10. ಅಮ್ಮಾ! ಮೃತ್ಯುದೇವತೆಯನ್ನು ನೆನಪಿಸುವಂತಹ ತೂಕ (4)
12. ತಾರಸಿಯ ಮೇಲೆ ಬೆಳೆದ ಹಣ್ಣಾದರೂ ಸಾರಭರಿತ (4)
16. ತರ್ಕಬದ್ಧ ಮಾತು ಆಡಿದರೂ ಆತ ಅಲೆಮಾರಿ (3)
17. ಕಲಿಯುವ ಆಸಕ್ತಿ ವಿಪರೀತ– ಅವನೊಬ್ಬ ಲಾಯರು (3)
18. ಕುಟ್ಟಿ ಕುಟ್ಟಿ ಕರೆವಾಗ ಏನೀ ಸದ್ದು? (4)

ಮೇಲಿಂದ ಕೆಳಕ್ಕೆ:

1. ಹೇಳಿದ್ದಾಯಿತಲ್ಲ, ಅದು ಸ್ವಲ್ಪವೂ ನೂತನವಲ್ಲ (3)
2. ಹಾವು ಕಚ್ಚಿತ್ತೆಂಬುದು ನಿಶ್ಚಿತವಾಯಿತು (3)
3. ದಾಡಿ ಇಲ್ಲದಿದ್ದರೇನು? ಎಂಥ ದೈತ್ಯ ನೋಡಿ (3)
5. ಬೇರಾವುದೂ ಸಮನಲ್ಲ, ಅಂತಹ ವೇಗ (3)
6. ಪೂರ್ವಜರಂತೆಯೇ ಯತ್ನಿಸಿ ಭಾರೀ ಸೋಲು (4)
7. ಕಷ್ಟವೇನೇ ಇರಲಿ, ಲಾಭವೂ ಇಲ್ಲವಾಯಿತಲ್ಲ (4)
8. ಹೊಂಗಿರಣ ಕಾಣುವಂತೆ ಮಾಡಲೂ ಆತನೇ ಜವಾಬ್ದಾರ (4)
9. ದಿವ್ಯ ಸಂಗತಿಗಳನ್ನು ತಿಳಿಸುತ್ತಿದ್ದವ ಸ್ವರ್ಗ ಸೇರಿದ (4)
11. ಭರತಖಂಡದ ಭಾಷೆಗಳಲ್ಲಿ ಆತ ಭಾರೀ ವಿದ್ವಾಂಸ (3)
13. ಆಳರಸನಾದರೂ ವ್ಯಕ್ತಿತ್ವ ಕಿಂಚಿತ್ತೂ ಸಂಕೀರ್ಣವಲ್ಲ (3)
14. ಪರರ ಕಷ್ಟಗಳೆಲ್ಲ ಪ್ರಚಾರವಾಯಿತೇ? (3)
15. ಆತನ ವ್ಯಾಪಾರಕ್ಕೆ ಬೇಕಾದ ಎಲ್ಲ ಸರಕು ಹೀಗೆ (3)

## 30–04–15ರ ಉತ್ತರಗಳು

ಎಡದಿಂದ ಬಲಕ್ಕೆ

1. ಸಂಗತಿ; 3. ಸೇವಕ; 4. ಮಿನುಗು; 6. ಟಗರು; 7. ಗೌರೀಸುತ; 9. ಬಿಗುಮಾನ; 11. ಸುಮಧುರ; 13. ತುರಂಗಮ; 15. ಶಂಬುಕ; 17. ಕುಹಕ; 18. ರಮಿಸು; 19. ರಹಣ

ಮೇಲಿಂದ ಕೆಳಕ್ಕೆ

1. ಸಂಕಟ; 2. ತಿಮಿರು; 3. ಸೇವಿಸು; 5. ಗುಡಗು; 7. ಗೌರವಿಸು; 8. ತಲೆಭಾರ; 9. ಬಿಸಿಮಾತು; 10. ನರಾಧಮ; 12. ಧುಮುಕು; 14. ರಂಜಿಸು; 15. ಶಂಕರ; 16. ಕರಣ

## ಪ್ರಶ್ನಾಂಕಣ

# ವಾಯೇಜರ್- ಏನು ವಿಶೇಷ?

ವಾಯೇಜರ್–ಅದೊಂದು ಅಸದೃಶ ವ್ಯೋಮನೌಕೆ. ವಾಸ್ತವವಾಗಿ ವಾಯೇಜರ್ ಹೆಸರಿನ ಎರಡು ವ್ಯೋಮನೌಕೆಗಳು (ವಾಯೇಜರ್–1 ಮತ್ತು ವಾಯೇಜರ್–2) ವ್ಯೋಮಯಾನ ನಿರತವಾಗಿವೆ. ಅವುಗಳ ಪೈಕಿ ವಾಯೇಜರ್–1 (ಚಿತ್ರ–2) ಈವರೆಗಿನ ಯಾವ ವ್ಯೋಮನೌಕೆಯೂ ಸಾಧಿಸಿಲ್ಲದ ಅತ್ಯದ್ಭುತ ದಾಖಲೆಗಳನ್ನು ಸೃಷ್ಟಿಸಿದೆ. ಪ್ರಮುಖ ವೈಶಿಷ್ಟ್ಯಗಳನ್ನು ಇಲ್ಲಿ ಗಮನಿಸಿ:

1977ರ ಸೆಪ್ಟೆಂಬರ್ 5 ರಂದು ಎಂದರೆ ಮೂವತ್ತೇಳು ವರ್ಷಗಳಿಗೂ ಹಿಂದೆ ಅಮೆರಿಕದ ನ್ಯಾಸಾ ಸಂಸ್ಥೆ ಹಾರಿಸಿದ ಈ ನೌಕೆ ಇಂದಿಗೂ ಪ್ರತಿ ಸೆಕೆಂಡ್‌ಗೂ ಸಮೀಪ ಹದಿನೇಳು ಕಿ.ಮೀ. ವೇಗದಲ್ಲಿ, ಎಂದರೆ ತಾಸಿಗೆ ಅರವತ್ತೊಂದು ಸಾವಿರ ಕಿ.ಮೀ. ವೇಗದಲ್ಲಿ, ನಿರಂತರ ಪಯಣಿಸುತ್ತಿದೆ. ವಿಶ್ವವನ್ನು ಅಭ್ಯಸಿಸುತ್ತ ಭೂಮಿಗೆ ಮಾಹಿತಿಗಳ ಮಹಾಪೂರವನ್ನೇ ಹರಿಸುತ್ತಿದೆ. ಇಷ್ಟು ದೀರ್ಘಕಾಲದ ಯಾನ ನಡೆಸಿರುವ ವ್ಯೋಮನೌಕೆ ಈವರೆಗೆ ಇನ್ನಾವುದೂ ಇಲ್ಲ.

2013 ಆಗಸ್ಟ್‌ನಲ್ಲಿ ಈ ನೌಕೆ ನಮ್ಮ ಸೌರವ್ಯೂಹದ ಸೀಮೆಯನ್ನು ದಾಟಿ ಅಲ್ಲಿಂದ ಒಗಿನ 'ಇಂಟರ್ ಸ್ಟೆಲ್ಲಾರ್ ಸ್ಪೇಸ್' ಅನ್ನು ಪ್ರವೇಶಿಸಿತು; ನಕ್ಷತ್ರ ಲೋಕವನ್ನು ಪ್ರವೇಶಿಸಿದ ಪ್ರಪ್ರಥಮ ನೌಕೆ ಎಂಬ ದಾಖಲೆಯನ್ನು ಸೃಷ್ಟಿಸಿತು. ಸದ್ಯದಲ್ಲಿ ನಮ್ಮಿಂದ ಇಪ್ಪತ್ತು ಶತಕೋಟಿ ಕಿ.ಮೀ. ದೂರದಲ್ಲಿದೆ; ಮುಂದೆ ಸಾಗುತ್ತಿದೆ.




ವಾಯೇಜರ್–1 ರಲ್ಲಿ ಅಳವಡಿಸಿರುವ ಪ್ಲುಟೋನಿಯಂ ಇಂಧನದ ವಿದ್ಯುತ್ ಉತ್ಪಾದಕ 2025ರ ವರೆಗೂ ಈ ನೌಕೆಯ ವೈಜ್ಞಾನಿಕ ಸಾಧನಗಳಿಗೆ ವಿದ್ಯುತ್ತನ್ನು ಒದಗಿಸಲಿದೆ. ಆ ನಂತರ ಸಂಪರ್ಕ ಸ್ಥಗಿತಗೊಳ್ಳುದಾದರೂ ಅದರ ಯಾನ ಮುನ್ನಡೆಯಲಿದೆ.

ನಕ್ಷತ್ರ ಲೋಕದಲ್ಲಿ ಅನಂತ ಯಾನ ನಡೆಸುವಂತೆ ಯೋಜಿಸಲಾಗಿರುವ ಈ ನೌಕೆ ಯಾವುದಾದರೂ 'ಅನ್ಯಗ್ರಹ'ಗಳನ್ನು ಸಮೀಪಿಸುವ ಸಾಧ್ಯತೆ ಇದೆ. ಅಂಥ ಯಾವುದಾದರೂ ಗ್ರಹ 'ಬುದ್ಧಿವಂತ ಜೀವಿ'ಗಳಿಂದ ಕೂಡಿದ್ದರೆ, ವಾಯೇಜರ್– 1 ನೌಕೆ ಅಂತಹ ಜೀವಿಗಳ ಕೈ ಸೇರಿದರೆ ಅವರಿಗೆ ನಮ್ಮ ಪೂರ್ಣ ವಿಳಾಸವನ್ನು ಎಂದರೆ ಕ್ಷೀರಪಥ ಗ್ಯಾಲಕ್ಸಿಯಲ್ಲಿ ನಮ್ಮ ಸೌರವ್ಯೂಹ ಇರುವ ಸ್ಥಳ ಅಲ್ಲಿ ನಮ್ಮ ಭೂಮಿಯ ನೆಲೆ ಇತ್ಯಾದಿ ಸ್ಥಳ ವಿವರಗಳನ್ನು ತಿಳಿಸಲು ಮತ್ತು ಧರೆಯ ಜೀವಿ ಸಾಮ್ರಾಜ್ಯದ ವೈಶಿಷ್ಟ್ಯಗಳನ್ನು ಅರಿವಾಗಿಸಲು ಗಣಿತೀಯ ಭಾಷೆಯಲ್ಲಿ ಕೆತ್ತಲಾದ ಬಂಗಾರ ಲೇಪಿತ, ಆಡಿಯೋ ಸಹಿತ ಡಿಸ್ಕ್ ಅನ್ನು (ಚಿತ್ರ–1) ಇರಿಸಲಾಗಿದೆ. ನಮ್ಮಂತೆಯೇ ತಾಂತ್ರಿಕವಾಗಿ ಮುನ್ನಡೆದ ಜೀವಿಗಳಿಗೆ ಈ ವಿವರ ಲಭಿಸಿದರೆ ಕೂಡಲೇ ಆ ಅನ್ಯಜೀವಿಗಳು ನಮ್ಮನ್ನು ಸಂಪರ್ಕಿಸಲೆಂಬುದು ಇದರ ಆಶಯ!

■ ಎನ್. ವಾಸುದೇವ್